RegdNo B G155 Sri 10—8—1965

ಸತ್ಯವಾದಿ

4 8th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಸ್ಕೃಡಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2ಪೈಸೆ

ಗರ್ಭಪಾತ

ಬೆಂಗಳೂರು— ನೂತನ ಗರ್ಭನಿರೋಧ ಸಲಕರಣೆ 'ಲೂಪ್' ನನ್ನು ಜನಪ್ರಿಯವಾಗುವಂತೆ ಮಾಡುವ ರೀತಿಗಳನ್ನು ಕಂಡು ಹಿಡಿಯುವ ಸಲುವಾಗಿ ಮೊನ್ನೆ ಸೇರಿದ್ದ ಕುಟುಂಬಯೋಜನಗಾರರು ತಿಕ್ಕಾಟದ ಸವ್ಯಸಾಚಿಯಾಗಿರುವ ಗರ್ಭಪಾತವನ್ನು ನ್ಯಾಯಸಮ್ಮತ ಮಾಡುವ ವಿಚಾರದ ಬಗ್ಗೆ ಚರ್ಚೆ ನಡೆಸಿದರು : ಪರವಾಗಿಯೂ ವಿರೋಧವಾಗಿಯೂ ಭಾಷಣಗಳಾದವು — ಈ ಸಮಸ್ಯೆಯ ಎಲ್ಲ ರೀತಿಯ ವಿಷಯಗಳನ್ನು ಪರಿಶೀಲಿಸಲು ಮಹಾರಾಷ್ಟ್ರದ ರೋಗ್ಯ ಮಂತ್ರಿ ಶ್ರೀ ಶಾಂತಿಲಾಲ ಷಾರವರ ನೇತೃತ್ವದಲ್ಲಿ ಸಮಿತಿಯೊಂದನ್ನು ಸ್ಥಾಪಿಸಲಾಗಿದ್ದು ಅದಲ್ಲಿ ಪ್ರಮುಖ ಡಾಕ್ಟರ್‌ಗಳೂ ಸಮಾಜ ಕಾರ್ಯಕರ್ತರು ಮಹಿಳೆಯ ಮುಖಂಡರೂ ಮುಂತಾದವರಿದ್ದಾರು — ಇಂದಿನ ಅತ್ಯಾಧುನಿಕ ಶಾಸನದಂತೆ ಒಬ್ಬ ವಿವಾಹಿತ ಮಹಿಳೆಗೆ ಗರ್ಭಪಾತ ಮಾಡಿದವರಿಗೆ 12 ವರ್ಷಗಳ ಸಜೆಯೂ ಅವಿವಾಹಿತ ಮಹಿಳೆಗೆ 6 ವರ್ಷಗಳವರೆಗೆ ಸಜೆಯೂ ವಿಧಿಸಲಾಗುವ ವಿಧಿ ಇದೆ — ಇಲ್ಲಿಯ ಚರ್ಚೆಯಲ್ಲಿ ಪರವಾಗಿ ಮಾತನಾಡಿದವರು ಸಮಾಜದ ಕಲ್ಯಾಣಕ್ಕಾಗಿ ಗರ್ಭಪಾತ ಅನಿವಾರ್ಯವೆಂದೂ, ಅದಾದ ನಂತರ ಮಹಿಳೆ ಗರ್ಭವಾಗದಂತೆ ಆ ಮಹಿಳೆಗೆ ಅಥವ ಅವಳ ಗಂಡನಿಗೆ ಶಸ್ತ್ರಚಿಕಿತ್ಸೆ ಮಾಡಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು — ವಿರೋಧಿಸಿದವರು ಪೈಕಿ ಬೊಂಬಾಯಿನ ಒಬ್ಬ ಮಹಿಳಾ ಡಾಕ್ಟರು, ಪೂನಾ ಅಂತಹ ಅಂತಹ ಅಂಶಗಳೊಡನೆ ಮಾತನಾಡಿದರು — ಗರ್ಭಪಾತವು ಎಲ್ಲ ದೇಶಗಳಲ್ಲಿಯೂ ನಡೆಯುತ್ತಿದ್ದು, ಫ್ರಾನ್ಸ್ ಜನನಗಳಷ್ಟೆ ಗರ್ಭಪಾತ ನಡೆಯುವುದರಲ್ಲಿ ಕುಪ್ರಖ್ಯಾತವಾಗಿದೆ — ಗರ್ಭಪಾತವು ಈ ಬಗ್ಗೆಯ ನಿಪುಣರಿಗೂ ಸಾಧಾರಣ ವಿಚಾರವಲ್ಲವೆಂದೂ ಇದರಲ್ಲಿ ಶಸ್ತ್ರ ಚಿಕಿತ್ಸೆಯಿದ್ದರೂ ಸಾವೂ ಹೆಚ್ಚಾಗಿದೆ ಎಂದು ಅಳೆತಿಳಿಸಿದಳು — ಜನಸಂಖೆ ಹತೋಟಿಗಾಗಿ ಗರ್ಭಪಾತವನ್ನು ನ್ಯಾಯಸಮ್ಮತ ಮಾಡುವ ದೇಶವೆಂದರೆ ಜಪಾನು ಮಾತ್ರ — ಅದು ಜನನದ ದರವನ್ನು ಅರ್ಧವಷ್ಟಿಗೆ ಇಳಿಸಿದ್ದರೂ ಈ ಸಂದರ್ಭದಲ್ಲಿ ಶುಂಬಾ ಪ್ರಾಣಹಾನಿಯಾಗಿದೆ — ಗರ್ಭನಿರೋಧಕ್ಕಾಗಿ ಸರಿಯಾದ ಉಪಕರಣ ಸಲಕರಣೆ ದೊರೆತಿರುವಾಗ ಗರ್ಭಪಾತವನ್ನು ನ್ಯಾಯಸಮ್ಮತ ಮಾಡುವ ಅವಶ್ಯಕತೆ ಇಲ್ಲವೆಂದ ಹೇಳಿದರು — ಮತ್ತೊರ್ವರೂ ತೀವ್ರವಾಗಿ ವಿರೋಧಿಸಿದ್ದರು — ಜನಸಂಖೆ ಹೆಚ್ಚೆಂಬುದೆ ಸಮಸ್ಯೆಯಾಗಿದ್ದರೆ 60 ವರ್ಷಕ್ಕೆ ವೆಲ್ಲಟ್ಟ ಜನರನ್ನು ಯಾಕೆ ಮುಗಿಸಿಬಿಡಬಾರದೆಂದು ಒಬ್ಬ ಸಮಾಜ ಕಾರ್ಯಕರ್ತೆ ಮಾಡಿ ಕೇಳಿದಳು — ಶಾಸನ ಅವಶ್ಯಕವಾದರೆ ಗರ್ಭಪಾತಕ್ಕೆ ಕೂಡದೆಂದೂ 3-4 ಮಕ್ಕಳಾದನಂತರ ಗೊಡ್ಡಾಗುವದು ಸುಶಿಕ್ಷಿತರು ಮಾಡಬೇಕೆಂದೂ ಒಬ್ಬರು ಹೇಳಿದರು — ಗರ್ಭಪಾತವೆಂದರೆ ಅನೀತಿ ಶಿಶು ಹತ್ಯವಲ್ಲದೆ ಮತ್ತೇನೂ ಅಲ್ಲವೆಂದು ದುತ್ತೊರ್ವ ವಿರೋಧಿ ಡಾಕ್ಟರು ಹೇಳಿದರು — ಭಾರತದಲ್ಲಿ ಗರ್ಭಪಾತವೆಂದರೆ ನೀತಿಯ ಅಧಃಪತನ ಮತ್ತು ಹೆಂದೂ ಗಳ ಪ್ರಾಣಾರ್ಪಣೆ ಎಂದು ಒಬ್ಬ ಯುವಕ ಘೋಷಿಸಿದನು.

ಭಾಷಣಗಳು ವೀರಾವೇಶ ಪೂರ್ಣಕ್ಕೆ ತಿರುಗಿದಾದ, ಅಧ್ಯಕ್ಷೆ ಮಿಸ್ ವತಿಯಾಂವರು ವೇದಿಕೆಗೆ ಬಂದು, ನಿಜವಾದ ಸಮಸ್ಯೆ ಗರ್ಭಪಾತವನ್ನು ಅನುಮೋದಿಸುವ ಶಾಸನ ಮಾಡುವುದಲ್ಲವೆಂದೂ, ಕೆಲ ಸಂದರ್ಭಗಳಲ್ಲಿ ಗರ್ಭಪಾತಕ್ಕೆ ಅನುವು ಕಾನೂನಿಯವುದಕ್ಕೆಂದೂ ಹೇಳಿದರು.

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪಕ್ಕ ಕೃಷ್ಣಜೋಯಿಸರಿಂದ

11 ಬುಧವಾರ ಚತುರ್ದಶಿ ಶ್ರವಣ

ನಾಳೆ ಉಪಾಕರ್ಮ ಪ್ರಯುಕ್ತ
ಸತ್ಯವಾದಿ ಹೃದಯಾಲಯಕ್ಕೆ ರಜವಿದೆ
ನಾಡಿದ್ದು ಯಜುರುಪಾಕರ್ಮ ಪ್ರಯುಕ್ತ ನಾಡಿದ್ದು ರಜ

ಪಾಟ್ನಾದಲ್ಲಿ ಹರತಾಳ ಗಲಭೆ, ಗೋಳೀಬಾರ್

ಪಾಟ್ನಾ — ನಿನ್ನೆ ಹರತಾಳದ ಸಂಬಂಧದಲ್ಲಿ ಗಲಭೆ ತೀವ್ರಗೊಳ್ಳುತ್ತಿರುವಲ್ಲಿ ಶಿಸ್ತು ಶಾಂತಿ ನೆಲೆಸಲು ಸಿವಿಲ್ ಅಧಿಕಾರಿಗಳಿಗೆ ಸಹಾಯಕ್ಕೆ ಮಿಲಿಟರಿ ಕರೆಸಲಾಯಿತು — ಸೆಕ್ರಿಟರಿಯಟ್ಟಿಗೆ ಐದು ಸಹಸ್ರ ಮಂದಿಯ ಗುಂಪು ಮುತ್ತಿದಾಗ ಈ ಕಾರ್ಯ ಕೈಗೊಳ್ಳಲಾಯಿತು — ಸಂಜೆ ರೈಲ್ವೆ ಗಾಡಿ ಮತ್ತು ಪಾರ್ಸಲ್ ಗೋಡೌನಿಗೆ ಬೆಂಕಿ ಹತ್ತಿಸಿದ ಗುಂಪನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದರು — ವಿದ್ಯಾರ್ಥಿ ಗಲಭೆಕಾರರನ್ನು ಚದುರಿಸಲು ಮಧ್ಯಾಹ್ನ ಅಶ್ರುವಾಯು ಪ್ರಯೋಗ ಮಾಡಿ ಬೆದರಿಸಲಾಗಿತ್ತು — ಡೆಪ್ಯುಟಿ ಪೋಲೀಸು ಐ ಜಿ ಗೂ ಕಲ್ಲಿನೇಟು ಬಿದ್ದಿತು — ಗುಂಪು ಬೆಂಕಿಪೊಟ್ಟ ರೈಲು ಸ್ಟೇಷನ್ನಿನ ಹತ್ತಿರ ಸರ್ಕಾರ ಇಳಿಸಿದ 3 ಟ್ರಕ್ಕು ಆಹಾರ ಧಾನ್ಯ ಲೂಟಿ ಮಾಡಿತು — ಗುಂಪಿನ ಕಲ್ಲು ಹೊಡೆತದಿಂದ ಮತ್ತು ಪೋಲೀಸರ ಗುಂಡು ಮತ್ತು ಅತಿ ಚಾರ್ಜಿನಿಂದ ಕಡೇ ಪಕ್ಷ 75 ಜನರು ಮೃತ್ತ 21 ಪ್ಯೂಲೀಸರು ಗಾಯಗೊಂಡಿದಿರುವರೆಂದು ನೋಡಿದವರ ಹೇಳಿಕೆ — ಶಾಸನಸಭಾ ಸದಸ್ಯರು ವಾಸವಮಾಡುವ ಗಾರ್ಡಿನರು ರಸ್ತೆಯಲ್ಲಿ ಟೆಲಿಫೋನು ಕತ್ತರಿಸಲ್ಪಟ್ಟಿದೆ — ಕರ್ಫೂ ಜಾರಿಮಾಡಲಾಗಿದೆ — ವಿದ್ಯಾರ್ಥಿಗಳು ಸ್ಕೂಲಿಗೆ ಹೋಗದೆ ರಸ್ತೆಯಲ್ಲಿ ಮೆಂವಣಿಗೆ ನಡೆಸಿದರು;

ಸಿಂಗಪುರ

ನಿನ್ನೆ ಸಿಂಗೆಪುರವು ಮಲೇಷಿಯಾದಿಂದ ಪ್ರತ್ಯೇಕಗೊಂಡು ಸ್ವತಂತ್ರವಾಯಿತು — ವಿಶ್ವಸಂಸ್ಥೆಗೆ ಸೇರುವುದು — ಕಾಮನ್ವೆಲ್ತಿನಲ್ಲಿರುವುದು — ಬ್ರಿಟಿಷು ನಿಲ್ದಾಣಗಳಿರುತ್ತವೆ

ಭ್ರಷ್ಟಾಚಾರ

ನವದೆಹಲಿ — ಭ್ರಷ್ಟಾಚಾರದ ಆಬ್ಯಾರಿ ಇನಸ್ಪೆಕ್ಟರೊಬ್ಬರ ಮನೆ ಶೋಧಿಸಿ 10 ಸಾವಿರ ರೂಗಳು ಮತ್ತು ಸರ್ಟಿಫಿಕೇಟುಗಳನ್ನು ಸೆಂಟ್ರಲ್ ಬೂರೋ ವಶಪಡಿಸಿಕೊಂಡರು — ಹೀಗೆ 8ನೇ ಟ್ರಾರು ವಾಹನ ನೆನಸ್ಪೆಕ್ಟರರ ಮನೆಶೋಧಿಸಲು ಒಬ್ಬರ ಮನೆಯಲ್ಲಿ ರೂ 229000 ಇತರರ ಮನೆಯಲ್ಲೂ ಹೆಚ್ಚೆಚ್ಚು ಹಣ ಸಿಗ್ಗಿತು

ಲೋಹಿಯಾ

ಪಾಟ್ನಾ — 144 ರ ನಿಶೇಧಾಜ್ಞೆಯನ್ನು ಉಲ್ಲಂಘಿಸಿ, ಡಾ॥ ಲೋಹಿಯಾ ನಿನ್ನೆ ಭಾಷಣ ಮಾಡಿ ಹಿಂಸಾಕಾರ್ಯದಲ್ಲಿ ತೊಡಗಬಾರದೆಂದು ಜೋಧಿಸಿದರು

ಮತ್ತೆ ಗುಂಡು

ಪಿಬಾಂಗು— ಪಾಕಿಸ್ತಾನಿಗಳು ಘರ್ಷಣೆಯಲ್ಲಿ ಮತ್ತು ಗುಂಡು ಹಾರಿಸುತ್ತಿರುವರು.

ಸ್ಫೋಟ

ಕೊಲಂಬೊ— ಸಿಲೋನಿನ ಬಚ್ಚಿಟ್ಟಿದ್ದಲ್ಲಿ ಭಾರಿ ವಿರುದ್ಧ ಕಂದಾಯಗಳೆಲ್ಲ ಪಜಾ ಮಾಡಲಾಯಿತು.

ಶ್ರೀನಗರ

ಶ್ರೀನಗರ— ಇಲ್ಲಿಗೆ ಪೂರ್ವ ಮೈಲಿ ದೊಂದಲ್ಲಿ ಸಶಸ್ತ್ರ ಪಾಕಿಸ್ತಾನಿ ಅಕ್ರಮಣ ಕಾರಿಂಗೂ ಭಾರತದ ಗಡಿಂಕ್ಷಕರಿಗೂ 3 ಘರ್ಷಣೆಗಳಾದವು.

ಸುಖಲೋಲೋಪಿ ಇಲ್ಲವೆಂದು ಜಿಕ್ಕ ವಯಸ್ಸಿನ ಪತಿಪತ್ನಿಯರು ಬೊಂಬಾಯಿನಲ್ಲಿ ಆತ್ಮಹತ್ಯ ಮಾಡಿಕೊಂಡರು.

ಕ್ರಿ ಪೂ 2450 ರದು

ಗುಜರಾತಿನ ತ್ರೋಕರಿನಲ್ಲಿ ಸುಮಾರು ಕ್ರಿ ಪೂ 2450 ರಲ್ಲಿ ಕಟ್ಟಲಾಗಿರುವ ದೊಡ್ಡ ಹಡಗುಗಳನ್ನು ನಿರ್ಮಿಸಲೂ ಸರಬರಾಜನ್ನು ತುಂಬಲೂ ಅನುಕೂಲಿಸುವಂತೆ ಕಟ್ಟಲಾಗಿರುವ ದೊಡ್ಡ ಕೃತಕ ರೇವು ಈಗ ಕಂಡುಹಿಡಿಯಲಾಗಿದೆ ; ಇದರಿಂದ ಗುಜರಾತಿನಲ್ಲಿ ಪುರಾತನದಾರೋ ವತ್ತ ಹರಪ್ಪ ಸಂಸ್ಕೃತಿಯು ಭದ್ರವಾಗಿ ನೆಲಸಿತ್ತೆಂಬುದಕ್ಕೆ ನುಕ್ಕಷ್ಟು ಸಾಕ್ಷ್ಯ ದೊರೆತಿರುತ್ತದೆ. — Truth

Protect the Cow

ಗೋಸಂರಕ್ಷಣೆ ಮತ್ತು ವ್ಯಾಪಾರದಲ್ಲಿ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Help The Gorakshana

Quality Printing — Neat Binding

Lakshminarasimha Press

Sivarampet, Mysore



ಗೋರಕ್ಷಣೆಗೆ ಬೆಂಬಲ ನೀಡಿ

ಸ್ವದೇಶಿನೀತಿಯಲ್ಲಿ ಗೋರಕ್ಷಣೆ ವ್ಯಾಪಾರದಲ್ಲಿ, ತಾಜಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಸ್ಮೆನೆ
ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಉದಾರ ಅನುಗ್ರಹ ಕೃಪೆಯಾಗಿಬೆ

ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 ; (ಒಂದು ಸಾರಿ ಮಾತ್ರ)
ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು 4

ವುಡ್‌ಲ್ಯಾಂಡ್ ಜಯಪ್ರದ 2ನೇ ವಾರ

ಅಮೋಘ ಆರಂಭ

ಜಾಯ್ ಮುಖರ್ಜಿ — ರಾಜಶ್ರೀಯವರ ಕಲಾತ್ಮಕ ಅಭಿನಯದಿಂದ ಕೂಡಿದ
.... ಚಿತ್ತಾಕರ್ಷಕ ಹಿಂದಿ ಚಿತ್ರಂತ್ಯ ....

ಜೀ ಚಾಹ್‌ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ— ಯಶಸ್ವಿ 2ನೇ ವಾರ

ದೊರಕಿತೆ ದೊಂಗಲು (ತೆಲುಗು)

ನಟವರ್ಗ— ಎಸ್ ಟಿ ರಾಮಾರಾವ್, ಕಾಂತಾರಾವ್, ರಾಜಶ್ರೀ, ರಾಜಲಕ್ಷ್ಮಿ
ಜಮುನಾ, ಗುಮ್ಮಡಿ, ರಮಣರೆಡ್ಡಿ, ನಾಗಯ್ಯ
ತೆಲುಗು ಪತ್ರೀದಾರಿ ಚಿತ್ರ] [ಪ್ರತಿ ದಿನ 3 ಆಟಗಳು



ರಮ್ಯ ಕಟ್ಟಡ

SHAKTI SUDHA

A Superb Tonic

Edited, Printed & Published by Dharma prachara nirata
M S Krishna Rao (Proprietor) at the Satyavadi Press
Chamarajapuram, Mysore 4